## ಬನಶಂಕರೀ ಒಂದನೇ ಹಂತದಲ್ಲಿ ನಗರ ಸಾರಿಗೆ ಬಸ್ ನಿಲ್ದಾಣ ಹಾಗೂ ಉದ್ಯಾನವನಕ್ಕೆ ಸ್ಥಳಾವಕಾಶ

೪೧೩. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಬನಶಂಕರಿ ೧ನೇ ಹಂತದ ಬಡಾವಣೆಯನ್ನು ಯಾವಾಗ ರೂಪಿಸಲಾಯಿತು. ಈ ಬಡಾವಣೆಯನ್ನು ರೂಪಿಸುವಾಗ ಸಾರ್ವಜನಿಕ ಉದ್ಯಾನವನ ಹಾಗೂ ನಗರ ಸ್ಥಾರಿಗೆ ಬಸ್ ನಿಲ್ದಾಣ ಪೋಸ್ಟ್ ಆಫೀಸ್ ಪೋಲೀಸ್ ಸ್ಟೇಷನ್‌ಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿವೇಶನ ಗಳನ್ನು ಕಾದಿರಿಸಿರಲಿಲ್ಲವೇ ?

(ಆ) ಹಾಗಿದ್ದಲ್ಲಿ, ಆ ನಿವೇಶನಗಳನ್ನು ಸಂಖ್ಯೆ ಎಷ್ಟು ಸದರಿ ನಿವೇಶನಗಳನ್ನು ತೋರಿಸುವ ಬಡಾವಣೆಯ ಲೇಔಟ್ ಪ್ಲಾನ್‌ನ ಒಂದು ಪ್ರತಿಯನ್ನು ಒದಗಿಸುವುದು

(ಇ) ಈ ರೀತಿ ಸಾರ್ವಜನಿಕ ಸೌಲಭ್ಯಗಳಿಗೆ ನಿವೇಶನಗಳನ್ನು ಕಾದಿರಿಸದೇ ಇದ್ದಲ್ಲಿ ಆದಕ್ಕೆ ಕಾರಣಗಳೇನು ? ಇದಕ್ಕಾಗಿ ಸೂಕ್ತ ನಿವೇಶನಗಳನ್ನು ಕಾದಿರಿಸದೇ ಇರುವುದರಿಂದ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲತೆಗಳನ್ನು ತಪ್ಪಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು)—

(ಅ) ಬನಶಂಕರಿ ೧ನೇ ಹಂತದ ಬಡಾವಣೆಯನ್ನು ೧೯೬೫ರಲ್ಲಿ ರೂಪಿಸಲಾಯಿತು, ವಿವಿಧ ಉಪಯೋಗಗಳಿಗಾಗಿ ಸಿ. ಎ. ನಿವೇಶನಗಳನ್ನು ಕಾದಿರಿಸಲಾಗಿದೆ.

(ಆ) ಸಿ. ಎ. ನಿವೇಶನಗಳ ಒಟ್ಟು ಸಂಖ್ಯೆ ೮ ಸದರಿ ನಿವೇಶನಗಳನ್ನು ಕೆಂಪು ಬಣ್ಣದಲ್ಲಿ ಬಡಾವಣೆಯ ನಕ್ಷೆಯಲ್ಲಿ ಗುರುತಿಸಿ ಪ್ರತಿಯನ್ನು ಸದನದ ಮುಂದೆ ಮಂಡಿಸಲಾಗಿದೆ.

(ಇ) ಉದ್ಭವಿಸುವುದಿಲ್ಲ

## ರಾಜ್ಯದ ಬೀಡಿ ಕಾರ್ಮಿಕರಿಗೆ ಕನಿಷ್ಟ ವೇತನ ಪರಿಷ್ಕರಣೆ

೭೦೨. ಶ್ರೀ ಸಂಭಾಶ್ ಜೋಶಿ. (ನಿಪ್ಪಾಣಿ) ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಬೀಡಿ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಯಾವಾಗ ಪರಿಷ್ಕರಿಸಲಾಗುವುದು ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು)—

ಈ ವಿಷಯವು ಕನಿಷ್ಟ ವೇತನ ಸಲಹಾ ಮಂಡಳಿಯ ಮುಂದಿದೆ. ಇತ್ತೀಚೆಗೆ ಸರ್ಕಾರಿ ಅಧಿಸೂಚನೆ ಸಂಖ್ಯೆ ಎಸ್‌ಡಬ್ಲ್ಯೂಎಲ್. ೩೩೩ ಎಲ್‌ಎಂಡಬ್ಲ್ಯೂ ೮೮ ದಿನಾಂಕ ೮-೫-೯೦ರ ಆದೇಶದಲ್ಲಿ ಸದರಿ ಸಲಹಾ ಮಂಡಳಿಯನ್ನು ಪುನರ್ ರಚಿಸಲಾಗಿದೆ. ಈ ಮಂಡಳಿಯ ಶಿಫಾರಸ್ಸುಗಳು ಸರ್ಕಾರಕ್ಕೆ ಬಂದೊಡನೆಯೇ ಬೀಡಿ ಕಾರ್ಮಿಕರ ಕನಿಷ್ಠ ವೇತನವನ್ನು ಪರಿಷ್ಕರಿಸಲು ಕ್ರಮ ಕೈಗೊಳ್ಳಲಾಗುವುದು.

## ನಿಪ್ಪಾಣಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ವಿಷಯ

೭೦೩. ಶ್ರೀ ಸಂಭಾಷ್ ಜೋಶಿ (ನಿಪ್ಪಾಣಿ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನಿಪ್ಪಾಣಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಮಾಡಲಾಗುವುದು?

ಶ್ರೀ ಕೆ.ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಜಿಲ್ಲಾ ಪುನರ್ ವಿಂಗಡಣಾ ಸಮಿತಿಯಿಂದ ವರದಿಯು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ರಾಜ್ಯದ ಪ್ರಸಕ್ತ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿರಿಸಿ ಸಧ್ಯದಲ್ಲಿ ಯಾವ ನಿರ್ಣಯವನ್ನೂ ತೆಗೆದುಕೊಂಡಿಲ್ಲ.